ಪದ್ಮ ಸಿಟ್ಟಿನಿಂದ ಗಂಡನಿಗೆ ಹೇಳಿದಳು, 'ಉಳಿಪಾಡಿಯೂ ಇಲ್ಲ, ಪರಪಾಡಿಯೂ ಇಲ್ಲ, ಇನ್ನು ಆ ಬೊಮ್ಮಿಯ ಸುದ್ದಿ ನಮಗೆ ಬೇಡ. ಅವಳಿದ್ದಾಳೆ, ಸರಕಾರಿ ಆಸ್ಪತ್ರೆ ಇದೆ!'

ಅಷ್ಟರಲ್ಲಿ ಯಮುನಕ್ಕ ನಿಧಾನವಾಗಿ ನಡೆದುಕೊಂಡು ಬಂದು ಮನೆಯ ವಯ್ಯಾಪ್ರೆಯನ್ನು ಪ್ರವೇಶಿಸಿ, ತಾನು ಟೀವಿ. ನೋಡಲು ಕುಳಿತುಕೊಳ್ಳುತ್ತಿದ್ದ ಮರದ ಕುರ್ಚಿಯ ಮೇಲೆ ಕುಳಿತಳು.

'ಬೊಮ್ಮಿಗೆ ಏನಂತೆ?' ಎಂದು ಕೇಳಿದಳು.

'ನೀವಾಗಬಹುದು, ನಿಮಗೆ ಇಷ್ಟು ಉಪದ್ರ ಕೊಟ್ಟರೂ ನಿಮ್ಮ ಮನಸ್ಸು ಅವಳ ಬಗ್ಗೆ ಮೃದುವಾಗಿಯೇ ಇದೆಯಲ್ಲ ಯಮುನಕ್ಕ?' ಪದ್ಮ ಅಚ್ಚರಿ ವ್ಯಕ್ತಪಡಿಸಿದಳು.

'ನಾವೆಲ್ಲ ಮನುಷ್ಯರಲ್ಲವೆ? ನೋಡಿಕೊಂಡು ಸುಮ್ಮನಿರಲು ಆಗುತ್ತದಾ?'

ಯಮುನಕ್ಕನಿಗೆ ಈಗ ಪದ್ಮಳ ಬಳಿ ಬೊಮ್ಮಿಯ ದ್ವೇಷಕ್ಕೆ ಕಾರಣವೇನು ಎಂದು ಕೇಳಬೇಕು ಅನಿಸಿತು. 'ಯಾಕೆ ಅವಳಿಗೆ ನನ್ನ ಮೇಲೆ ಅಷ್ಟು ಕೋಪ? ನಿನಗೇನಾದರೂ ಗೊತ್ತಿದೆಯಾ ಪದ್ಮ?' ಎಂದು ಕೇಳಿಯೇಬಿಟ್ಟರು.

ಪದ್ಮ ಸ್ವಲ್ಪ ಹೊತ್ತು ಸುಮ್ಮನಿದ್ದು ನಂತರ ಹೇಳಿದಳು, 'ನಿಮಗೆ ಹೇಗೆ ಹೇಳುವುದೂಂತ ಇದ್ದೆ. ಅವಳಿಗೆ ನೀವು ಯಾವಾಗಲೂ ಮಾಟ ಮಾಡಿಸುತ್ತಾ ಇರುತ್ತೀರಿ ಎಂದು ಸಂಶಯ ಮೊದಲಿನಿಂದಲೂ ಇತ್ತಂತೆ. ಅವಳ ಗಂಡ ಅವಳನ್ನು ಬಿಟ್ಟುಹೋಗುವಂತೆ ಮಾಡಿದ್ದು ನೀವಂತೆ, ಮಾಟ ಮಾಡಿಸಿ. ನಿಮ್ಮ ಗಂಡ ಬಿಟ್ಟರಲ್ಲ, ಅದಕ್ಕೆ ಅವಳೂ ಸುಖವಾಗಿರಬಾರದು ಎಂದು ಮಾಡಿದ್ದಂತೆ. ಅವಳು ನನ್ನ ಬಳಿ ಹಲವು ಸಲ ಹೇಳಿದ್ದಾಳೆ. ನಾನು ನಿಮಗೆ ಯಾಕೆ ಬೇಜಾರು ಎಂದು ಹೇಳಲಿಲ್ಲ.'

ಅನಂತ ಪದ್ಮನಾಭ ರಾಯರು ನಡುವೆ ಹೇಳಿದರು, 'ಬೊಮ್ಮಿಯ ಗಂಡ ಮೊದಲೇ ಬೊಂಬಾಯಿಯಲ್ಲಿ ಮರಾಟಿ ಹೆಂಗಸಿನ ಜತೆಗೆ ಸಂಸಾರ ಮಾಡುತ್ತಿದ್ದವನಂತೆ. ಇಲ್ಲಿ ಮನೆಯವರ ಒತ್ತಾಯಕ್ಕೆ ಸ್ವಲ್ಪ ವರದಕ್ಷಿಣೆ ತಕೊಂಡು ಇವಳನ್ನು ಕಟ್ಟಿಕೊಂಡ. ಆ ಮೇಲೆ ಬಿಟ್ಟುಹೋದ. ಆ ಮರಾಟಿ ಹೆಂಗಸು ಮತ್ತೆ ಅವನನ್ನು ಊರಿಗೆ ಬರಲಿಕ್ಕೆ ಬಿಡಲಿಲ್ಲ ಎಂದು ಕಾಣುತ್ತದೆ. ಅಥವಾ ಉಳಿಪಾಡಿಗೆ ಬಂದುಹೋಗುತ್ತಿದ್ದನೋ ಏನೋ? ಅಂತೂ ಬೊಮ್ಮಿಯ ಹಣೆಬರಹಕ್ಕೆ ಯಮುನಕ್ಕ ಕಾರಣ ಎಂದು ಬೊಬ್ಬೆ ಹಾಕಿದರೆ ಆದೀತಾ? ಅವಳದೊಂದು!'

'ಅದು ನನ್ನ ಹಣೆಬರಹ!' ಎಂದು ಯಮುನಕ್ಕ ಮಾರ್ಮಿಕವಾಗಿ ಹೇಳಿದಳು.

## ಬಿ. ಜನಾರ್ದನ ಭಟ್

ಉಡುಪಿ ಜಿಲ್ಲೆ ಕಾರ್ಕಳ ತಾಲೂಕಿನ ಬೆಳ್ಮಣ್ಣಿನವರಾದ ಭಟ್ಟರು ವಿದ್ಯಾಭ್ಯಾಸ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ. ಎ. ಪದವಿ. ಪ್ರಸ್ತುತ ಬೆಳ್ಮಣ್ಣುವಿನ ಸರಕಾರಿ ಪ.ಪೂ. ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್. ಡಿ. ಪಡೆದಿದ್ದಾರೆ.

ಹತ್ತನೆಯ ತರಗತಿಯಲ್ಲಿರುವಾಗ(1975) ಇವರು ಬರೆದ ಸಣ್ಣ ಕತೆ 'ಪೊಲೀಸರು' 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. ನಾಲ್ಕು ಕಾದಂಬರಿ, ಎರಡು ಕಥಾಸಂಕಲನ ಸಹಿತ 56 ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. 'ಹಸ್ತಾಂತರ', 'ಉತ್ತರಾಧಿಕಾರ' ಅವರ ಕಾದಂಬರಿಗಳು. 'ಓಬೀರಾಯನ ಕಾಲದ ಕತೆಗಳು' ಅವರ ಸಂಪಾದಿತ ಪುಸ್ತಕ. 'ಮೂರು ಹೆಜ್ಜೆ ಭೂಮಿ' ಅವರ ಇತ್ತೀಚಿನ ಕಾದಂಬರಿ.